## “1 ಲಕ್ಷ ಬಹು ಮಹಡಿ ಬೆಂಗಳೂರು ವಸತಿ ಯೋಜನೆ”–

## 2 ಬಿ.ಹೆಚ್.ಕೆ. ಕುರಿತು ಮಾಹಿತಿ

ಬೆಂಗಳೂರು ನಗರಜಿಲ್ಲೆ ವ್ಯಾಪ್ತಿಯ 5 ತಾಲ್ಲೂಕುಗಳಲ್ಲಿ ಬರುವ ಸರ್ಕಾರಿ ಜಮೀನುಗಳಲ್ಲಿ ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ **“1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ”** ಅಡಿಯಲ್ಲಿ 2ಬಿ.ಹೆಚ್.ಕೆ.– 8096 ಫ್ಲಾಟ್/ಮನೆಗಳನ್ನು Shear Wall ತಂತ್ರಜ್ಞಾನವನ್ನು ಅಳವಡಿಸಿಕೊಂಡು ನಿರ್ಮಿಸಲಾಗುತ್ತಿದೆ. ಇವುಗಳ ಪೈಕಿ ಮೊದಲ ಹಂತದಲ್ಲಿ 3138 [G+3 to S+14], ಫ್ಲಾಟ್/ಮನೆಗಳ ಹಂಚಿಕೆಗಾಗಿ ಆನ್–ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಪ್ರತಿ ಮನೆ/ಫ್ಲಾಟ್‌ನ ಕಾರ್ಪೆಟ್ ಏರಿಯಾ – 45 ಚ.ಮೀ. (485 Sq.ft.),

ಪ್ರತಿ ಮನೆ/ಫ್ಲಾಟ್‌ನಲ್ಲಿ 1 ಹಾಲ್, 1 ಮಲುಗುವ ಕೋಣೆ (ಸ್ನಾನ ಗೃಹ ಸಹಿತ), 1 ಮಲಗುವ ಕೋಣೆ, 1 ಪ್ರತ್ಯೇಖ ಸ್ನಾನ ಹಾಗೂ ಶೌಚ ಗೃಹ ಹಾಗೂ 1 ಅಡುಗೆ ಕೋಣೆಯೊಂದಿಗೆ ಯುಟಿಲಿಟಿ ಒಳಗೊಂಡಿರುತ್ತದೆ.

ಪ್ರತಿ ಘಟಕದ ಅಂದಾಜು ಮೊತ್ತ ರೂ.**14.00** ಲಕ್ಷಗಳು

2 ಬಿ.ಹೆಚ್.ಕೆ. ಮನೆ/ಫ್ಲಾಟ್‌ಗಳ ಹಂಚಿಕೆಗಾಗಿ ಆನ್–ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಲ್ಲಿಸಬೇಕಿರುವ ಅಗತ್ಯ ದಾಖಲೆಗಳು:

- ಆಧಾರ್ ಸಂಖ್ಯೆ,
- ಜಾತಿ ಪ್ರಮಾಣ ಪತ್ರ ಸಂಖ್ಯೆ (ಕಂದಾಯ ಇಲಾಖೆಯಿಂದ ನೀಡಲಾಗುವ ಪ್ರಮಾಣ ಪತ್ರದ ಸಂಖ್ಯೆಯನ್ನು ಮಾತ್ರ ನಮೂದಿಸುವುದು),
- ಕುಟುಂಬದ ಪಡಿತರ ಚೀಟಿ ಸಂಖ್ಯೆ (ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ನೀಡಲಾಗುವ ಪಡಿತರ ಚೀಟಿಯ ಸಂಖ್ಯೆಯನ್ನು ಮಾತ್ರ ನಮೂದಿಸುವುದು),

- ಕುಟುಂಬದ ಆದಾಯ ಪ್ರಮಾಣ ಪತ್ರ ಸಂಖ್ಯೆ (ಕಂದಾಯ ಇಲಾಖೆಯಿಂದ ನೀಡಲಾಗುವ ಪ್ರಮಾಣ ಪತ್ರದ ಸಂಖ್ಯೆಯನ್ನು ಮಾತ್ರ ನಮೂದಿಸುವುದು),
- ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಕನಿಷ್ಠ ೫ ವರ್ಷಕ್ಕಿಂತ ಮೇಲ್ಪಟ್ಟು ವಾಸವಾಗಿರುವ ವಾಸ ದೃಢೀಕರಣ ಪತ್ರ ಸಂಖ್ಯೆ (ಕಂದಾಯ ಇಲಾಖೆಯಿಂದ ನೀಡಲಾಗುವ ಪ್ರಮಾಣ ಪತ್ರದ ಸಂಖ್ಯೆಯನ್ನು ಮಾತ್ರ ನಮೂದಿಸುವುದು),
- ಬ್ಯಾಂಕ್ ಖಾತೆ ಸಂಖ್ಯೆ (ಖಾತೆ ಸಂಖ್ಯೆ, ಬ್ಯಾಂಕ್ ಹೆಸರು, ಬ್ರಾಂಚ್ ಹೆಸರು, ಐಎಫ್‌ಎಸ್‌ಸಿ ಸಂಖ್ಯೆ) ಹಾಗೂ
- ದಿವ್ಯಾಂಗ ಚೇತನಗುರುತಿನ ಚೀಟಿ (ಸರ್ಕಾರದ ಅಧಿಕೃತ ಸಂಸ್ಥೆಯಿಂದ ನೀಡಲಾಗುವ ಗುರುತಿನ ಚೀಟಿ).

ಫ್ಲಾಟ್/ಮನೆಯ ಆಯ್ಕೆದಾರರು ಹಣವನ್ನು ಈ ಕೆಳ ನಮೂದಿಸಿರುವಂತೆ ಪಾವತಿಸಬೇಕಾಗುತ್ತದೆ.

**ಆಯ್ಕೆದಾರರು ವಂತಿಕೆಗಳನ್ನು ಪಾವತಿಸುವ ಅವಧಿ:**

| | | | (ರೂ. ಲಕ್ಷಗಳಲ್ಲಿ) |
|---|---|---|---|
| **2 ಬಿ.ಹೆಚ್.ಕೆ. ಮನೆ/ಫ್ಲಾಟ್‌ನ ಘಟಕ ವೆಚ್ಚ** | **1ನೇ ಕಂತು ಅರ್ಹತೆ ಪರಿಶೀಲಿಸಿದ ಕೂಡಲೇ** | **2ನೇ ಕಂತು ಫ್ಲಾಟ್ ಆಯ್ಕೆ ಮಾಡಿದ 30 ದಿನಗಳೊಳಗೆ (ಸ್ವ ಉಳಿತಾಯ/ ಬ್ಯಾಂಕ್ ಲೋನ್)** | **3ನೇ ಕಂತು ಫ್ಲಾಟ್ ನೋಂದಣಿ ಮಾಡಿಕೊಳ್ಳುವಾಗ (ಸ್ವ ಉಳಿತಾಯ/ ಬ್ಯಾಂಕ್ ಲೋನ್)** |
| **14.00** | **3.00** | **5.00** | **6.00** |

ಹೆಚ್ಚಿನ ವಿವರಗಳಿಗಾಗಿ:https://ashraya.karnataka.gov.in

| | | |
|---|---|---|
| 9164239699 | 9448277072 | 9606138200 |
| 8660807796 | 9448021564 | 7975956234 |

ಕಛೇರಿ ವಿಳಾಸ: ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, 8/9ನೇ ಮಹಡಿ, "ಇ" ಬ್ಲಾಕ್, ಕ.ಗೃ.ಮಂ. ಕಟ್ಟಡ, ಕೆಂಪೇಗೌಡ ರಸ್ತೆ, ಬೆಂಗಳೂರು- 560 009.

• • • • • • • • • •